

# ಸಮನ್ವಯ ಶಿಕ್ಷಣ ನೀತಿಯ ಅನುಷ್ಠಾನದಲ್ಲಿ ತೊಡಕುಗಳು: ಅಲ್ಮೋರಾದ ಲಮ್ಗಾರಾ ವಿಭಾಗದ ಕ್ಷೇತ್ರ ವೀಕ್ಷಣೆ

ಜಯಶ್ರೀ ಪಾಂಡೆ

ಸಮನ್ವಯ ಶಿಕ್ಷಣದ ಕಲ್ಪನೆ ಭಾರತಕ್ಕೆ ಹೊಸತಲ್ಲದಿದ್ದರೂ, ಶಿಕ್ಷಣದ ಹಕ್ಕು (ರೈಟ್ ಟು ಎಜುಕೇಷನ್) ಯಾವಾಗ ಮೂಲಭೂತ ಹಕ್ಕಿನ ಸ್ಥಾನ ಪಡೆಯಿತೋ ಅಂದಿನಿಂದ ಇದೂ ಹೆಚ್ಚು ಪ್ರಚಲಿತವಾಯಿತು. ಪ್ರತಿಯೊಂದು ಮಗುವನ್ನೂ ಸಮಾನವಾಗಿ ನೋಡಿ, ಅದರ ಸಂಪೂರ್ಣ ಸಾಮರ್ಥ್ಯವನ್ನು ಆ ಮಗುವಿನ ಅರಿವಿಗೆ ತರುವ ಅವಕಾಶ ಒದಗಿಸುವ ಚಿಂತನೆಯೇ ಸಮನ್ವಯ ಶಿಕ್ಷಣದ ಆಧಾರ. ಅಂದರೆ ಬೋಧನಾ ಪದ್ಧತಿಯಲ್ಲಿ ಜಾತಿ, ಮತ, ಜನಾಂಗ, ಲಿಂಗ, ಸಾಮರ್ಥ್ಯ ಇದಾವುದರ ವ್ಯತ್ಯಾಸಗಳನ್ನೂ ನೋಡದೆ, ಪ್ರತಿಯೊಂದು ಮಗುವಿನ ಅಗತ್ಯಗಳನ್ನು ಸರಿಯಾಗಿ ಗುರುತಿಸಬೇಕೆಂಬುದನ್ನು ಇದು ಸೂಚಿಸುತ್ತದೆ.

ನೀತಿಯಾಗಿ ನೋಡಿದಾಗ ಸಮನ್ವಯ ಶಿಕ್ಷಣ ನೀತಿಯು ಸೌಹಾರ್ದಯುತ ಮತ್ತು ಪರಿಣಾಮಕಾರಿಯಾಗಿದ್ದು, ಅಸಂಖ್ಯಾತ ಭಿನ್ನ ಸಾಮರ್ಥ್ಯದ (Differently abled) ಮಕ್ಕಳ ಅಗತ್ಯಗಳನ್ನು ಪೂರೈಸುವಲ್ಲಿ ಯಶಸ್ವಿಯಾಗುವಂತೆ ಕಂಡುಬಂದರೂ, ವಾಸ್ತವಿಕವಾಗಿ ಅದರ ಮನಸ್ಸಿಲ್ಲದ ಮನಸ್ಸಿನ ಅನುಷ್ಠಾನವನ್ನು ನೋಡಿದಾಗ ಮನಸ್ಸು ಕುಗ್ಗಿ ಹೋಗುತ್ತದೆ.

ಲಮ್ಗಾರಾ ವಿಭಾಗದ ಅಲ್ಮೋರಾದಲ್ಲಿ ಸರ್ಕಾರದ ನೀತಿಯಲ್ಲಿರುವ ಲೋಪದೋಷಗಳು, ಸಮುದಾಯ ಮತ್ತು ಶಿಕ್ಷಕರ ಭಾವಶೂನ್ಯತೆ ಮತ್ತು ಬೇಜವಾಬ್ದಾರಿ ಧೋರಣೆ, ವಿಶೇಷ ಶಿಕ್ಷಕರ ಉತ್ಸಾಹ ಸ್ಫೂರ್ತಿಗಳು ಜರ್ರೆಂದು ಇಳಿದು ಹೋಗುತ್ತಿರುವುದು– ಇವೆಲ್ಲ ಒಳಗೊಂಡ ಬಲು ಆಸೆಯಿಂದ ಜಾರಿಗೆ ತರಲಿಚ್ಛಿಸಿದ ಸಮನ್ವಯ ಶಿಕ್ಷಣ ನೀತಿಯ ಅನುಷ್ಠಾನದ ನಿರಾಶಾದಾಯಕ ಕಥೆಯನ್ನು ಈ ಲೇಖನ ಮುಂದಿಡುತ್ತಿದೆ.

## ಕೆಲವು ಕ್ಷೇತ್ರ ಅವಲೋಕನಗಳು

ಅಜೀಂ ಪ್ರೇಂಜಿ ಫೌಂಡೇಶನ್‌ನ ಫೆಲೋಶಿಪ್ ಕಾರ್ಯಕ್ರಮದ ಅಂಗವಾಗಿ ಫೆಲೋಶಿಪ್ ದಾರರು ಶಾಲೆಗಳಿಗೆ ಭೇಟಿಕೊಟ್ಟು, ತರಗತಿಗಳಲ್ಲಿನ ಬೋಧನಾ ವಿಧಾನಗಳು, ಸರ್ಕಾರದ ಶಿಕ್ಷಣ ಪದ್ಧತಿಗಳಲ್ಲಿರುವ ಜಟಿಲತೆಗಳನ್ನು ವ್ಯಾಪಕವಾಗಿ ಅವಲೋಕಿಸಬೇಕಾಗುತ್ತದೆ. ಸಾಕಷ್ಟು ವ್ಯಾಪಕವಾಗಿ ಬೆಳೆಯುತ್ತಿರುವ ಅಲ್ಮೋರಾ ಜಿಲ್ಲೆಯ ಲಮ್ಗಾರಾ ವಿಭಾಗದ ಕ್ಷೇತ್ರ ವೀಕ್ಷಣೆ ಮಾಡಿದಾಗ, ಭಿನ್ನ ಸಾಮರ್ಥ್ಯದ ಮಕ್ಕಳ ಬಗ್ಗೆ ಇರುವ ನೀತಿಯ ಅನುಷ್ಠಾನ ಮತ್ತು ಕಾರ್ಯಾಚರಣೆಯಲ್ಲಿ ನನಗೆ ಎದ್ದು ಕಾಣಿಸಿದ ಸಾಕಷ್ಟು ಸಮಸ್ಯೆಗಳನ್ನು ನಾನು ಈ ಲೇಖನದಲ್ಲಿ ವಿಶೇಷವಾಗಿ ತಿಳಿಸಿದ್ದೇನೆ.

## ಮುಖ್ಯವಾಹಿನಿಗೆ ಸೇರಿಸುವುದೋ ಅಥವಾ ಪ್ರತ್ಯೇಕವಾಗಿ ಕೂಡಿಹಾಕುವುದೋ

ಸಮನ್ವಯ ಶಿಕ್ಷಣವೆಂದರೆ ಭಿನ್ನಸಮರ್ಥ ಮಕ್ಕಳಿಗೆ ವಾಡಿಕೆಯ ಅಥವಾ ವಿಶೇಷ ಶಾಲೆಗಳಲ್ಲಿ ಶಿಕ್ಷಣಕ್ಕೆ ಅನುವು ಮಾಡಿಕೊಟ್ಟು, ಅವರವರ ಅಗತ್ಯಗಳಿಗೆ ಸೂಕ್ತವಾದ ಶೈಕ್ಷಣಿಕ ಪರಿಸರವನ್ನು ಒದಗಿಸುವುದು. ಸರ್ವ ಶಿಕ್ಷಣ ಅಭಿಯಾನದ 'ಯಾರಿಗೂ ಶಿಕ್ಷಣ ನಿರಾಕರಿಸುವಂತಿಲ್ಲ' ಎಂಬ ನೀತಿಯ ಅನುಸಾರ, ಪ್ರತಿಯೊಂದು ಮಗುವಿಗೂ ಶಿಕ್ಷಣದ ಹಕ್ಕು ದೊರೆಯುತ್ತದೆ ಮತ್ತು ಪ್ರತಿಯೊಂದು ಮಗುವನ್ನೂ ಮುಖ್ಯವಾಹಿನಿಗೆ ತರಬೇಕೆಂದು ಅದು ಹೇಳುತ್ತದೆ. ಆದರೆ ಸಾಕಷ್ಟು ಸಂಪನ್ಮೂಲಗಳ ನೆರವಿಲ್ಲದಿದ್ದರೆ ಮತ್ತು ಪ್ರತಿಮಗುವಿಗೂ ಪ್ರತ್ಯೇಕ ಪಾಠ ಯೋಜನೆಯನ್ನು ರೂಪಿಸದೇ ಇದ್ದರೆ ಇಂತಹ ಮಕ್ಕಳನ್ನು ಕೇವಲ ಪ್ರತ್ಯೇಕವಾಗಿ ಕೂಡಿಹಾಕಿದಂತೆ ಆಗುತ್ತದೆ.

ಲಮ್ಗಾರಾದಲ್ಲಿ ವಿಶೇಷ ಶಾಲೆಗಳು ಇಲ್ಲದ ಕಾರಣ, ವಿಶೇಷ ಅಗತ್ಯಗಳಿರುವ ಅನೇಕ ಮಕ್ಕಳು ವಾಡಿಕೆಯ ಶಾಲೆಗಳಲ್ಲಿ ದಾಖಲಾತಿಯಾಗಿ, ತರಗತಿಗಳಲ್ಲಿ ಪಾಸಾಗಿ ಮೇಲೆ ಏರುತ್ತಿದ್ದರೂ ಸಹ ಅವರ ಜ್ಞಾನದಲ್ಲಿ ಮಾತ್ರ ಯಾವುದೇ ಏರಿಕೆ ಕಂಡುಬಂದಿಲ್ಲ. ಹೀಗೆ ಒಂದು ಶಾಲೆಗೆ ಹೋದಾಗ, ಓದಲು, ಬರೆಯಲು ಕಡೆಗೆ ಮಾತನಾಡಲೂ ಬರದ ಮಗುವೊಂದು ನಾಲ್ಕನೆಯ ತರಗತಿಯಲ್ಲಿ ಓದುತ್ತಿರುವುದನ್ನು ನಾನು ಗಮನಿಸಿದೆ. ಸೇರ್ಪಡೆ ಪೂರ್ವ ಕಾರ್ಯಕ್ರಮಗಳ ಕೊರತೆ ಮತ್ತು ವಾಡಿಕೆಯ ಶಾಲೆಗಳ ಅಸಮರ್ಪಕ ನೆರವಿನಿಂದ ಇವರನ್ನು ಮುಖ್ಯವಾಹಿನಿಗೆ ಸೇರಿಸುವುದು ಕೇವಲ ಔಪಚಾರಿಕವಾಗಿ ಉಳಿಯುತ್ತದೆ.

### ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳು

ತರಗತಿಗಳಲ್ಲಿ ಸಮನ್ವಯ ಪರಿಸರವನ್ನು ಒದಗಿಸುವಲ್ಲಿ ಶಿಕ್ಷಕರ ಶಿಕ್ಷಣವು ಒಂದು ದುರ್ಬಲ ಕೊಂಡಿಯಾಗಷ್ಟೇ ಉಳಿದಿದೆ. ಈಗ ಇರುವ ಶಿಕ್ಷಕರ ಶಿಕ್ಷಣದ ಡಿಗ್ರಿ ಮತ್ತು ಡಿಪ್ಲೊಮೋ ವ್ಯಾಸಂಗ ಕ್ರಮಗಳಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಯಾವುದೇ ವಿಶೇಷ ಶಿಕ್ಷಣ ಕ್ರಮ ಇರುವುದಿಲ್ಲ. ಇಂತಹ ವ್ಯಾಸಂಗ ಕ್ರಮಗಳು ಎಷ್ಟು ಮುಖ್ಯ ಮತ್ತು ಈ ನಿಟ್ಟಿನಲ್ಲಿ ಶಿಕ್ಷಕರ ತಯಾರಿಯು ಎಷ್ಟು ಅಗತ್ಯ ಎಂಬುದನ್ನು ಮನಗಾಣಲು ಸರ್ಕಾರವು ಸೋತಿದೆ ಎಂಬುದನ್ನು ಇದು ಎತ್ತಿ ತೋರಿಸುತ್ತದೆ.

ಅಲ್ಮೋರಾದಲ್ಲಿ ವಿಶೇಷ ಶಾಲೆಗಳು ಇಲ್ಲದ ಕಾರಣ, ಇಂತಹ ಮಕ್ಕಳ ಅಗತ್ಯತೆಗಳನ್ನು ಅರಿತುಕೊಳ್ಳಲು ವಾಡಿಕೆಯ ಶಿಕ್ಷಕರನ್ನು ಸಜ್ಜುಗೊಳಿಸುವುದು ಅತ್ಯಂತ ಪ್ರಮುಖ ಅಂಶವಾಗಿದೆ. ಇಲ್ಲಿನ ನಿಯತ ಶಿಕ್ಷಕರಲ್ಲಿ ಈ ಬಗ್ಗೆ ಸರಿಯಾದ ಜ್ಞಾನ ಮತ್ತು ತರಬೇತಿಯ ಕೊರತೆಯಿರುವ ಕಾರಣ ಇವರುಗಳು ಇಂತಹ ಮಕ್ಕಳ ಪರಿಪೂರ್ಣ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಹಾನಿಕಾರಕವಾಗಬಹುದಾದ ಚಟುವಟಿಕೆಗಳಲ್ಲಿ ನಿರತವಾಗಿರುವುದು ಕಂಡುಬರುತ್ತಿದೆ. ಹೀಗೆ ಒಂದು ಶಾಲೆಗೆ ಭೇಟಿ ಕೊಟ್ಟಾಗ, ಭಿನ್ನಸಮರ್ಥ ಮಗುವೊಂದು ಶಾಲಾ ಊಟದ ಸಮಯದಲ್ಲಿ ತನ್ನ ಆಹಾರವನ್ನು ಇತರರ ತಟ್ಟೆಗೆ ಎಸೆಯುತ್ತಿತ್ತು ಎಂಬ ಕಾರಣದಿಂದ ಅಲ್ಲಿನ ಶಿಕ್ಷಕರೊಬ್ಬರು ಆ ಮಗುವನ್ನು ಇತರೆ ಮಕ್ಕಳಿಂದ ದೂರವಿಟ್ಟಿದ್ದು ಕಂಡುಬಂದಿತು. ತರಗತಿಗಳಲ್ಲಿ ಅವನು ಉಳಿದ ಮಕ್ಕಳಿಗೆ ತೊಂದರೆ ಕೊಡುತ್ತಾನೆ ಎಂಬ ಕಾರಣದಿಂದ ಅವನು ಪ್ರತ್ಯೇಕವಾಗಿ ಕುಳಿತು ಅಭ್ಯಾಸ ಮಾಡುವಂತಾಗಿದೆ. ಹೀಗೆ ಬೇರೆಡೆ ಕೂರಿಸುವುದೇ ಈ ತೊಂದರೆಗೆ ಸೂಕ್ತವಾದ ಪರಿಹಾರವೇ? ಮಕ್ಕಳಿಗೆ ತಮ್ಮ ಗೆಳೆಯರ, ಶಿಕ್ಷಕರ ಮತ್ತು ಸಮೂಹದ ಅನುಭೂತಿಯ ಅಗತ್ಯವಿದೆ ಎನ್ನುವುದಕ್ಕೆ ಎರಡನೆಯ ಮಾತೇ ಇಲ್ಲ. ಹಾಗಿದ್ದಲ್ಲಿ ಮಾತ್ರ ಅವರುಗಳು ಏಳಿಗೆಯಾಗಿ ಬೆಳೆಯಲು ಸಾಧ್ಯ.

### ಸೇವಾನಿರತ ಶಿಕ್ಷಕರ ತರಬೇತಿ

ಸಮನ್ವಯ ಶಿಕ್ಷಣ ನೀತಿಯಲ್ಲಿ ಶಿಕ್ಷಕರ ಶಿಕ್ಷಣ ಅತಿ ಅವಶ್ಯವಾದ ಅಂಶ, ಹಾಗೆಯೇ ಬಹಳ ಚಿಂತಾದಾಯಕ ಅಂಶವೂ ಆಗಿದೆ.

ಶಾಲಾ ಮಟ್ಟದಲ್ಲಿ ಈ ನೀತಿಯ ಯಶಸ್ವಿ ಅನುಷ್ಠಾನಕ್ಕೆ ಶಿಕ್ಷಕರಲ್ಲಿ ಸಕಾರಾತ್ಮಕ ದೃಷ್ಟಿಕೋನದ ಅಗತ್ಯವಿದೆ. ತರಗತಿಗಳಲ್ಲಿ ವಿವಿಧ ಬಗೆಯ ಸವಾಲುಗಳ ನಿರ್ವಹಣೆ ಮತ್ತು ವಿಶೇಷ ಅಗತ್ಯವಿರುವ ಮಕ್ಕಳಿಗೆ ಕಲಿಯಲು ಸಹಕಾರಿಯಾದ ಪರಿಸರವನ್ನು ರೂಪಿಸುವದರಲ್ಲಿ ಶಿಕ್ಷಕರಲ್ಲಿ ಕುಶಲತೆ ಮತ್ತು ವಿಶ್ವಾಸ ತುಂಬುವುದು ನಿಜಕ್ಕೂ ಬೃಹತ್ ಕಾರ್ಯವಾಗಿದ್ದು, ಇದಕ್ಕಾಗಿ ಸಂಪನ್ಮೂಲಗಳ ರೂಪದಲ್ಲಿ ತರಬೇತಿ ಮತ್ತು ಪರಿಣಿತರ ನೆರವು ಮುಂತಾದವು ಅಗತ್ಯವಿವೆ.

ಶ್ರವಣ ದೋಷ ತಜ್ಞ ಮತ್ತು ಅಲ್ಮೋರಾದ ಏಕೈಕ ಸಂಪನ್ಮೂಲ ವ್ಯಕ್ತಿಯಾದ ಶ್ರೀ.ಬಿಜೇಂದ್ರ ಯಾದವ್ ಅವರ ಬಳಿ ಸಂಭಾಷಣೆ ನಡೆಸಿದಾಗ, ಅವರ ನಿಗದಿತ ಮೂರು ವರ್ಷದ ಅವಧಿಯಲ್ಲಿ, 2014ರಲ್ಲಿ ಮೊಟ್ಟ ಮೊದಲ ಬಾರಿಗೆ ಆ ವಿಭಾಗದಲ್ಲಿ ಶಿಕ್ಷಕರ ಶಿಕ್ಷಣ ತರಬೇತಿ ನಡೆಯಿತು ಎಂಬುದು ನನಗೆ ತಿಳಿಯಿತು. 2009ರಲ್ಲಿ ಆರ್‌ಟಿಇ ಕಾಯ್ದೆಯ ಜಾರಿಯಾದ ಬಳಿಕ ಸಮನ್ವಯ ಶಿಕ್ಷಣ ನೀತಿಗೆ ಹೆಚ್ಚು ಒತ್ತು ಕೊಟ್ಟಿದ್ದರೂ, ತರಬೇತಿ ಕಾರ್ಯಕ್ರಮದ ಗುಣಮಟ್ಟ ಕಳಪೆಯಾಗಿದ್ದು, ಅದೂ ಹೆಸರಿಗೆ ಮಾತ್ರ ಮಾಡಿರುವುದರಿಂದ ಆಡಳಿತ ಮಂಡಳಿಯ ದಿವ್ಯ ನಿರ್ಲಕ್ಷ್ಯವನ್ನು ನಾವು ಅಳೆಯಬಹುದು.

ಶಿಕ್ಷಕರಲ್ಲಿ ಒಲ್ಲದ ಮನಸ್ಸು ಇದ್ದಲ್ಲಿ ಶಾಲೆಗಳಲ್ಲಿ ಸಮನ್ವಯ ಶಿಕ್ಷಣದ ಬೋಧನೆ – ಕಲಿಕೆಯ ಕನಸುಗಳ ಸಾಕಾರ ನಿಜಕ್ಕೂ ಅಸಾಧ್ಯ. ತರಬೇತಿ ಕಾರ್ಯಕ್ರಮಗಳ ಗುಣಮಟ್ಟ ಶಿಕ್ಷಕರ ಭಾವಶೂನ್ಯ ಧೋರಣೆಗೆ ಕಾರಣ ಎಂದು ಹೇಳಬಹುದು. ಆದರೂ, ಅಸಮರ್ಥತೆಯಂತಹ ಜಟಿಲ ವಿಚಾರಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಶಿಕ್ಷಕರಿಗೆ ಇಚ್ಛೆ ಇರಬೇಕಾದ್ದು ಬಲು ಮುಖ್ಯ. ಇದಕ್ಕೆ ತರಬೇತಿಗಳು ಬಹಳ ಸಹಾಯ ಮಾಡಬಲ್ಲವು.

### ಸಾಕಷ್ಟು ಸಂಪನ್ಮೂಲ ಶಿಕ್ಷಕರು ಇಲ್ಲದಿರುವುದು

ಸ.ಶಿ.ಅ ಕಾರ್ಯಕ್ರಮದಡಿಯಲ್ಲಿ, ಪ್ರತಿಯೊಂದು ಭಿನ್ನಸಮರ್ಥ ಮಗುವನ್ನು ಅದರ ಸಮೀಪವಿರುವ ಯಾವುದೇ ಶಾಲೆಯಲ್ಲಿ ದಾಖಲು ಮಾಡಿ ಸಾಕಷ್ಟು ನೆರವಿನ ಸೌಕರ್ಯಗಳನ್ನು ಒದಗಿಸಬೇಕಾಗುತ್ತದೆ. ಆರ್‌ಟಿಇ ಕಾಯ್ದೆಯ ಪ್ರಕಾರ ವಸತಿ ಶಾಲೆಗಳಾಗಿರಲಿ ಅಥವಾ ಸಾಮಾನ್ಯ ಶಾಲೆಗಳಾಗಿರಲಿ ಅಲ್ಲಿ ಇಂತಹ ಮಕ್ಕಳಿಗೆ ವಿಶೇಷ ತರಬೇತಿಯನ್ನು ಒದಗಿಸಬೇಕಾಗುತ್ತದೆ.

ಶ್ರೀ ಯಾದವ್ ಇಂತಹ 89 ಭಿನ್ನಸಮರ್ಥ ಮಕ್ಕಳನ್ನು ನೋಡಿಕೊಳ್ಳಬೇಕಾಗಿತ್ತು ಮತ್ತು ಇದು ನಿಜಕ್ಕೂ ಭಗೀರಥ ಪ್ರಯತ್ನ. ಇಂತಹ ಗುಡ್ಡ–ಗಾಡು ಪ್ರದೇಶಗಳಲ್ಲಿ ಕೆಲವು ತೊಂದರೆಗಳಿಂದ ಅಲ್ಲಿ ಒಂದು ಭೇಟಿಯಿಂದ ಇನ್ನೊಂದು ಭೇಟಿಯ ನಡುವೆ 2 ರಿಂದ 6 ತಿಂಗಳು ಕಳೆದು ಹೋಗುತ್ತವೆ. ಇಂತಹ ಮಕ್ಕಳಿಗೆ ಯಾವ ರೀತಿಯ ಶೈಕ್ಷಣಿಕ ನೆರವು ದೊರೆಯುತ್ತಿದೆ ಮತ್ತು ಅವರಿಗೆ ಇದರಿಂದ ಎಷ್ಟರ ಮಟ್ಟಿಗೆ ಉಪಯೋಗವಾಗುತ್ತಿದೆಯೆಂದು ಯಾರಿಗಾದರೂ ಈಗಾಗಲೇ ಅರ್ಥವಾಗಿರಬಹುದು. ಇಂತಹ ಮಕ್ಕಳನ್ನು ನೋಡಿಕೊಳ್ಳಲು ಕೇವಲ ಒಬ್ಬ ಶಿಕ್ಷಕರು ಸಾಲದು .ತಾವು ಶ್ರವಣ ದೋಷ ತಜ್ಞರಾದ ಕಾರಣ ಇತರ ದೋಷಗಳಿರುವ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳಲಾಗುತ್ತಿಲ್ಲ ಎಂದು ಅವರು ಒಪ್ಪಿಕೊಂಡಿದ್ದಾರೆ.

ಸಂಪನ್ಮೂಲವುಳ್ಳ ಶಿಕ್ಷಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡಿರುವುದು ಭಿನ್ನಸಮರ್ಥ ಮಕ್ಕಳ ಸಬಲೀಕರಣಕ್ಕೆ

ಮತ್ತೊಂದು ತಡೆಯಾಗಿದೆ. ಹೀಗಿದ್ದರೂ ಸಂಪನ್ಮೂಲ ಶಿಕ್ಷಕರಿಂದ ಈ ಮಕ್ಕಳಿಗೆ ಸ್ಥಿರ ಮತ್ತು ಭಾವನಾತ್ಮಕ ನೆರವು ಒದಗಿಸುವುದು ಬಹಳ ಅಗತ್ಯ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಅದೇ ಇಲ್ಲದೆ ಹೋದಲ್ಲಿ ಇಂತಹ ಮಕ್ಕಳ ಸಾಮಾಜಿಕ ಮತ್ತು ಜೀವನದ ಕೌಶಲ್ಯಗಳ ಉತ್ತೇಜನ ಅಸಾಧ್ಯ. ಇತ್ತೀಚೆಗಷ್ಟೇ ತಮ್ಮ ಗುತ್ತಿಗೆಯ ಅವಧಿಯನ್ನು ಪೂರ್ಣಗೊಳಿಸಿದ ಶ್ರೀ ಬಿಜೇಂದ್ರ ಯಾದವ್‌ರವರು "ನಾನೇನೋ ಬರಬಹುದು, ಹೋಗಬಹುದು. ಆದರೆ ನನ್ನ ಮಕ್ಕಳಿಗೆ ಸದಾ ನನ್ನ ಅಗತ್ಯವಿರುತ್ತದೆ. ಅವರನ್ನು ಯಾರು ನೋಡಿಕೊಳ್ಳುತ್ತಾರೆ?" ಎಂದು ಕೇಳುತ್ತಾರೆ.

ಇಂತಹ ಮಕ್ಕಳಿಗೆ ಮನೆಯಲ್ಲೇ ಶಿಕ್ಷಣವನ್ನು ನೀಡುವ ತರಬೇತುದಾರರು ಅವರ ತಂದೆ ತಾಯಿಗಳು ಅಥವಾ ವಿದ್ಯಾವಂತ ಸಮುದಾಯದ ಸದಸ್ಯರಾಗಿದ್ದು, ಕೇವಲ ವರ್ಷಕ್ಕೊಮ್ಮೆ DIET (District Institute for Education & Training) ನಲ್ಲಿ ತರಬೇತಿ ಪಡೆಯುತ್ತಾರೆ. ಆದರೆ ಸಾಮಾನ್ಯ ಮನುಷ್ಯರಿಗೆ ಕೆಲವು ದಿನಗಳು ಮಾತ್ರ ನಡೆಯುವ ತರಬೇತಿ ಮಾಡ್ಯೂಲ್‌ಗಳಿಂದ ಇಂತಹ ಭಿನ್ನಸಮರ್ಥ ಮಕ್ಕಳ ಗ್ರಹಣ ಶಕ್ತಿ, ಭಾವನೆಗಳು ಮತ್ತು ನಡವಳಿಕೆಯ ಅಂಶಗಳನ್ನು ಅರ್ಥಮಾಡಿಕೊಳ್ಳಲು ಸಾಕಾಗುವುದಿಲ್ಲ. ಲಮ್ಗಾರಾದ ಸಂಪನ್ಮೂಲ ಶಿಕ್ಷಕರ ಪ್ರಕಾರ 'ಸ.ಶಿ.ಅ ಅಡಿಯಲ್ಲಿ ಮನೆಯ ಶಿಕ್ಷಣ ಅವರಿಗೆ ತಿಂಗಳಿಗೆ ರೂ. 500/– ಸಂಪಾದನೆ ಮಾಡಲು ಮಾರ್ಗವಾಗಿದೆಯಷ್ಟೇ'.

## ತಂದೆತಾಯಿಗಳ ಮತ್ತು ಸಮುದಾಯದ ಅಸಹಕಾರ

ಸಮರ್ಥತೆಯು ಒಂದು ಸಾಮಾಜಿಕ ಸ್ವರೂಪವನ್ನು ಹೊಂದಿದ್ದು, ಅದರಲ್ಲಿ ಕುಟುಂಬಗಳು ಮತ್ತು ಸಮುದಾಯವು ಭಿನ್ನಸಮರ್ಥ ಮಕ್ಕಳ ಸಾಮರ್ಥ್ಯವನ್ನು ಬೆಳೆಸುವಲ್ಲಿ ಮತ್ತು ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ.

ಕುಟುಂಬದವರ ಸಹಕಾರ ಇಲ್ಲದ ಪಕ್ಷದಲ್ಲಿ ಸಮನ್ವಯ ಶಿಕ್ಷಣದ ಎಲ್ಲಾ ಪ್ರಯತ್ನಗಳು ನಿರರ್ಥಕವಾಗುತ್ತವೆ. ಶ್ರೀ ಯಾದವ್‌ರೊಂದಿಗೆ ಸಂಭಾಷಣೆ ನಡೆಸಿದಾಗ, ಭಿನ್ನಸಮರ್ಥ ಮಕ್ಕಳ ತಂದೆತಾಯಿಗಳು ತಾವು ನಡೆಸುವ ಜಾಗೃತಿ ಶಿಬಿರಗಳಿಗೆ ಹಾಜರಾಗಲು ನಿರಾಕರಿಸುತ್ತಾರೆ ಎನ್ನುವ ಬಹು ಪ್ರಮುಖವಾದ ಅಂಶ ಹೊರಬಂದಿತು. ಇದರಿಂದ ತಮಗೆ ಹಣ ಸಿಗುವುದಾದರೆ ಮಾತ್ರ ತಾವು ಬರುವುದಾಗಿ ಅವರು ನೇರವಾಗಿ ಹೇಳಿದ್ದರು. ತಂದೆತಾಯಿಗಳ ಇಂತಹ ಮನಸ್ಥಿತಿಗೆ ಬಡತನ, ನಿರುದ್ಯೋಗ, ಅನಕ್ಷರತೆ, ಜಾಗೃತಿಯ ಕೊರತೆ ಹೀಗೆ ಅಸಂಖ್ಯಾತ ಕಾರಣಗಳಿರಬಹುದು. ಗುಡ್ಡಗಾಡು ಪ್ರದೇಶಗಳಲ್ಲಿ ಉದ್ಯೋಗಾವಕಾಶ ಇಲ್ಲದ ಕಾರಣ, ಸಾಕಷ್ಟು ಕುಟುಂಬಗಳು ದಿನಗೂಲಿಗಾಗಿ ಕೆಲಸ ಮಾಡುತ್ತಿದ್ದು, ಒಂದು ದಿನದ ಶಿಬಿರಕ್ಕೆ ಬಂದರೆ ಆ ದಿನದ ಕೂಲಿ ಕಳೆದುಕೊಳ್ಳಬೇಕಾಗುತ್ತದೆ. ಮತ್ತಷ್ಟು ಸನ್ನಿವೇಶಗಳಲ್ಲಿ, ಅನಕ್ಷರತೆ ಮತ್ತು ಜಾಗೃತಿಯ ಕೊರತೆಯಿಂದ ಭಿನ್ನಸಮರ್ಥ ಮಕ್ಕಳ ಪರಿಸ್ಥಿತಿಗೆ ಭೂತಚೇಷ್ಟೆ ಅಥವಾ ದುಷ್ಟ ಶಕ್ತಿಗಳೇ ಕಾರಣ ಮತ್ತು ಇವುಗಳನ್ನು ತಮ್ಮ ಸ್ಥಳೀಯ ವೈದ್ಯರೇ ಸರಿಮಾಡುತ್ತಾರೆಂದು ತಪ್ಪಾಗಿ ಅರ್ಥ ಮಾಡಿಕೊಂಡಿರುತ್ತಾರೆ.

## ಮುಂದಿನ ಹಾದಿ

ಇಂತಹ ಕಷ್ಟಕರ ಮತ್ತು ಜಟಿಲ ಸನ್ನಿವೇಶಗಳಲ್ಲಿ ಯಾವುದೇ ಒಂದು ಸೂಕ್ತ ತೀರ್ಮಾನಕ್ಕೆ ಬರುವುದು ಅಸಾಧ್ಯವಾದುದರಿಂದ, ಅಲ್ಮೋರಾದ ಲಮ್ಗಾರಾ ವಿಭಾಗದಲ್ಲಿ ಈ ನೀತಿಯ ಸರಿಯಾದ ಅನುಷ್ಠಾನಕ್ಕೆ ಕೆಲವು ಪ್ರಸ್ತಾವಗಳನ್ನು ಮಾತ್ರ ನೀಡಲು ಸಾಧ್ಯ.

- ಇಂತಹ ಮಕ್ಕಳಿಗೆ ಯಾವುದಾದರೊಂದು ನಿಗದಿತ ಸ್ಥಳದಲ್ಲಿ ಇತರೆ ಮಕ್ಕಳೊಂದಿಗೆ ಒಟ್ಟಿಗೆ ಇದ್ದು ಓದಲು ಅನುಕೂಲವಾಗುವಂತೆ ಕನಿಷ್ಠ ೯೦ ದಿನಗಳ ಕಾಲ ಬ್ರಿಡ್ಜ್ ಕೋರ್ಸ್ ನಡೆಸುವುದು. ಇದರಲ್ಲಿ ಅವರಿಗೆ ಗರಿಷ್ಠ ಲಾಭವಾಗುವಂತಹ ವೇಳಾಪಟ್ಟಿ ಮತ್ತು ಪಠ್ಯಕ್ರಮವೂ ಇರಬೇಕು.
- ಶಿಕ್ಷಕರ ನಿರಾಸಕ್ತ ಮನೋಭಾವಕ್ಕೆ ನೀರಸವಾದ ತರಬೇತಿ ಕಾರ್ಯಕ್ರಮಗಳು ಕಾರಣವಾಗಿರಬಹುದು. ನಾಲ್ಕು ಗೋಡೆಗಳ ಮಧ್ಯೆ ತರಬೇತಿ ಕಾರ್ಯಕ್ರಮ ನಡೆಸುವ ಬದಲು ಹೊರಾಂಗಣದಲ್ಲಿ ಇಂತಹ ಮಕ್ಕಳೊಂದಿಗೆ ತರಬೇತಿ ನಡೆಸುವುದು ಸೂಕ್ತ. ಇಂತಹ ಮಕ್ಕಳನ್ನು ಮತ್ತು ಅವರ ಅಗತ್ಯಗಳನ್ನು ಅರ್ಥಮಾಡಿಕೊಳ್ಳಲು ಶಿಕ್ಷಕರಿಗೆ ಬೇಕಾಗಿರುವ ವಿಶ್ವಾಸವೂ ಇದರಿಂದ ದೊರೆಯುತ್ತದೆ.
- ಇಂತಹ ಮಕ್ಕಳ ತಂದೆತಾಯಿಗಳು ಸಕ್ರಿಯವಾಗಿ ಭಾಗವಹಿಸುವಂತೆ ನೋಡಿಕೊಳ್ಳಲು ಅವರನ್ನು ಶಾಲಾ ಆಡಳಿತ ಮಂಡಳಿಯಲ್ಲಿ (SMCs) ಸೇರಿಸಿಕೊಂಡು ಅದರಲ್ಲಿ ಅಸಮರ್ಥತೆ ಕುರಿತು ತರಬೇತಿ ಅವಧಿಗಳನ್ನು ನಿಗದಿಗೊಳಿಸಬಹುದು.
- ಇಂತಹ ಮಕ್ಕಳ ಕಲಿಕೆಯನ್ನು ಉತ್ತಮಗೊಳಿಸಲು ಸಾಕಷ್ಟು ಸಂಪನ್ಮೂಲವುಳ್ಳ ಶಿಕ್ಷಕರ ನಿರಂತರ ಉಪಸ್ಥಿತಿ ಬಹಳ ಮುಖ್ಯ.
- ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳಲ್ಲಿ 'ಅಸಮರ್ಥತೆಯ ಅಧ್ಯಯನಕ್ಕೆ ಸ್ಥಾನ ನೀಡುವುದು'.

**ಜಯಶ್ರೀ**ಯವರು 2013–2015ನೇ ಬ್ಯಾಚ್‌ನಲ್ಲಿ ಅಜೀಂ ಪ್ರೇಂಜಿ ಫೌಂಡೇಶನ್‌ನ ಫೆಲೋ ಆಗಿದ್ದರು. ಅವರು ಮಹಿಳೆ ಮತ್ತು ಲಿಂಗ ತಾರತಮ್ಯದ ಅಧ್ಯಯನದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿದ್ದಾರೆ. ಅವರಿಗೆ ಮಕ್ಕಳೆಂದರೆ ಬಲು ಪ್ರೀತಿ. ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ಮಕ್ಕಳಿಗಾಗಿ ಕೆಲಸ ಮಾಡಲು ಇವರು ಇಚ್ಛಿಸುತ್ತಾರೆ. ಅವರನ್ನು jayshree.pande@azimpremjifoundation.org ನಲ್ಲಿ ಸಂಪರ್ಕಿಸಬಹುದು. **ಅನುವಾದಕರು**: ಚಂದ್ರಿಕಾ ವಿಜಯೇಂದ್ರ **ಪರಿಶೀಲನೆ**: ಭಾಗ್ಯಲಕ್ಷ್ಮಿ ಪದಕಿ.